All India Radio: Bangalore
National Bulletin In Kannada

**ಆಕಾಶವಾಣಿ, ಬೆಂಗಳೂರು**

**ರಾಷ್ಟ್ರೀಯ ವಾರ್ತೆಗಳು**

06.04.2026 19.35 hrs

***************

ಮುಖ್ಯಾಂಶಗಳು

- ದೇಶದಲ್ಲಿ ಸಾಕಷ್ಟು ಆಹಾರ ಧಾನ್ಯ ಸಂಗ್ರಹ; ಬೆಲೆ ಮತ್ತು ಪೂರೈಕೆ ಮೇಲೆ ಕಟ್ಟುನಿಟ್ಟಿನ ನಿಗಾ - ಕೇಂದ್ರ ಸರ್ಕಾರದ ಕ್ರಮ
- ಇದೇ ೯ ರಂದು ಮತದಾನ ನಿಗದಿಯಾಗಿರುವ ಅಸ್ಸಾಂ, ಕೇರಳ, ಪುದುಚೆರಿ ಕೇಂದ್ರಾಡಳಿತ ಪ್ರದೇಶಗಳ ವಿಧಾನಸಭೆ ಹಾಗೂ ಉಪಚುನಾವಣೆ ನಡೆಯಲಿರುವ ಕ್ಷೇತ್ರಗಳಲ್ಲಿ ಬಹಿರಂಗ ಪ್ರಚಾರಕ್ಕೆ ನಾಳೆ ತೆರೆ
- ದೇಶದಲ್ಲಿ ಮೀನು ಉತ್ಪಾದನೆ ಕಳೆದ ೧೦ ವರ್ಷಗಳಲ್ಲಿ ದ್ವಿಗುಣ
- ಏಷ್ಯನ್ ಬಾಕ್ಸಿಂಗ್ ಚಾಂಪಿಯನ್‌ಶಿಪ್; ಭಾರತ ಪ್ರೀತಿ ಪವಾರ್ ಫೈನಲ್ಸ್‌ಗೆ
- ಐಪಿಎಲ್ ಟಿ-೨೦ ಕ್ರಿಕೆಟ್; ಪಂಜಾಬ್ ಕಿಂಗ್ಸ್ ವಿರುದ್ಧ ಟಾಸ್ ಗೆದ್ದ ಕೊಲ್ಕತ್ತಾ ನೈಟ್ ರೈಡರ್ಸ್ ತಂಡ ಬ್ಯಾಟಿಂಗ್ ಆಯ್ಕೆ

***************

ದೇಶದಲ್ಲಿ ಸಾಕಷ್ಟು ಆಹಾರ ಧಾನ್ಯ ಸಂಗ್ರಹ ಇದೆ ಎಂದು ಕೇಂದ್ರ ಸರ್ಕಾರ ಸ್ಪಷ್ಟಪಡಿಸಿದೆ.

ಪಶ್ಚಿಮ ಏಷ್ಯಾ ಸಂಘರ್ಷದ ಹಿನ್ನೆಲೆಯಲ್ಲಿ ಈ ಖಾತರಿಯನ್ನು ಸರ್ಕಾರ ನೀಡಿದೆ. ಪಶ್ಚಿಮ ಏಷ್ಯಾದಲ್ಲಿನ ಇತ್ತೀಚಿನ ವಿದ್ಯಮಾನ ಕುರಿತಂತೆ ದೆಹಲಿಯಲ್ಲಿ ಇಂದು ನಡೆದ ಅಂತರ ಸಚಿವಾಲಯ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಗ್ರಾಹಕ ವ್ಯವಹಾರ ಇಲಾಖೆಯ ಹೆಚ್ಚುವರಿ ಕಾರ್ಯದರ್ಶಿ ಅನುಪಮ ಮಿಶ್ರಾ ಅವಶ್ಯಕ ಸಾಮಗ್ರಿಗಳ ಬೆಲೆಯಲ್ಲಿ ಯಾವುದೇ ಏರಿಕೆ ಉಂಟಾಗಿಲ್ಲ ಎಂದರು.

ದೇಶದಲ್ಲಿ ಬೇಳೆ-ಕಾಳು ಉತ್ಪಾದನೆ ಕಳೆದ ವರ್ಷಕ್ಕಿಂತ ಹೆಚ್ಚಾಗಿದೆ. ಸರ್ಕಾರ ಅವಶ್ಯಕ ವಸ್ತುಗಳ ಬೆಲೆ ಮತ್ತು ಪೂರೈಕೆಯ ಮೇಲೆ ನಿಗಾವಹಿಸಿದೆ ಎಂದರು.

ಧ್ವನಿ: ಅನುಪಮ ಮಿಶ್ರಾ

ಆಹಾರ ಮತ್ತು ಸಾರ್ವಜನಿಕ ವಿತರಣಾ ಇಲಾಖೆ ಜಂಟಿ ಕಾರ್ಯದರ್ಶಿ ಶಿಖಾ ಮಾತನಾಡಿ, ದೇಶದಲ್ಲಿ ಅಕ್ಕಿ ಮತ್ತು ಗೋಧಿ ಸಂಗ್ರಹ ಸಾಕಷ್ಟು ಇದೆ. ೨೦೨ ಲಕ್ಷ ಮೆಟ್ರಿಕ್ ಟನ್ ಆಹಾರ ದಾಸ್ತಾನು ಇದೆ ಎಂದರು.

ಸರ್ಕಾರ ರಾಷ್ಟ್ರೀಯ ಆಹಾರ ಭದ್ರತಾ ಯೋಜನೆಯಡಿ ದುರ್ಬಲ ವರ್ಗದವರಿಗೆ ಆಹಾರ ಧಾನ್ಯ ಒದಗಿಸುತ್ತಿದೆ. ಮುಕ್ತ ಮಾರುಕಟ್ಟೆ ಯೋಜನೆಯಡಿಯೂ ಬೆಲೆ ಸ್ಥಿರತೆ ಕಾಪಾಡಿಕೊಳ್ಳಲಾಗುತ್ತಿದೆ. ಖಾದ್ಯ ತೈಲ ಮತ್ತು ಸಕ್ಕರೆ ಪೂರೈಕೆ ಸಮಾಧಾನಕರವಾಗಿದೆ ಎಂದು ಅವರು ತಿಳಿಸಿದ್ದಾರೆ.

ಬಂದರು, ಶಿಫಿಂಗ್ ಮತ್ತು ಜಲಮಾರ್ಗ ಸಚಿವಾಲಯದ ಹೆಚ್ಚುವರಿ ಕಾರ್ಯದರ್ಶಿ ಮುಖೇಶ್ ಮಂಗಲ್ ಮಾತನಾಡಿ, ಎಲ್‌ಪಿಜಿ ಹೊತ್ತ ಎರಡು ಭಾರತೀಯ ನೌಕೆಗಳಾದ ಗ್ರೀನ್ ಸಾಂಗ್ವಿ ಗ್ರೀನ್ ಆಶಾ ಸುರಕ್ಷಿತವಾಗಿ ಹಾರ್ಮುಜ್ ಜಲಸಂಧಿಯನ್ನು ಕಳೆದ ಎರಡು ದಿನಗಳಲ್ಲಿ ದಾಟಿ ಬಂದಿವೆ.

ಪಶ್ಚಿಮ ಏಷ್ಯನ್ ಗಲ್ಫ್ ವಲಯದಲ್ಲಿ ಭಾರತೀಯ ಧ್ವಜದ ೧೬ ನೌಕೆಗಳು ಇವೆ ಎಂದು ತಿಳಿಸಿದ್ದಾರೆ.

ಪೆಟ್ರೋಲಿಯಂ ಹಾಗೂ ನೈಸರ್ಗಿಕ ಅನಿಲ ಸಚಿವಾಲಯದ ಜಂಟಿ ಕಾರ್ಯದರ್ಶಿ ಸುಜಾತಾ ಶರ್ಮಾ ಮಾತನಾಡಿ, ಪ್ರತಿ ದಿನ ಸುಮಾರು ೫೦ ಲಕ್ಷ ಎಲ್‌ಪಿಜಿ ಸಿಲಿಂಡರ್‌ಗಳನ್ನು ಬಳಕೆಗಾಗಿ ಒದಗಿಸಲಾಗುತ್ತಿದೆ. ಆನ್‌ಲೈನ್ ಬುಕ್ಕಿಂಗ್ ದಾಖಲೆಯ ಶೇಕಡ ೯೭ ಪ್ರಮಾಣವನ್ನು ತಲುಪಿದೆ ಎಂದು ತಿಳಿಸಿದ್ದಾರೆ,

ಧ್ವನಿ: ಸುಜಾತಾ ಶರ್ಮಾ

ಇರಾನ್‌ನಲ್ಲಿ ಸಿಲುಕಿಕೊಂಡಿರುವ ೧ ಸಾವಿರದ ೭೭೭ ಭಾರತೀಯರನ್ನು ಅರ್ಮೇನಿಯಾ ಹಾಗೂ ಅಜರ್ ಬೈಜಾನ್ ಮೂಲಕ ದೇಶಕ್ಕೆ ಕರೆ ತರಲಾಗಿದೆ ಎಂದು ವಿದೇಶಾಂಗ ವ್ಯವಹಾರ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್ ತಿಳಿಸಿದ್ದಾರೆ.

***************

ದೇಶದಲ್ಲಿ ಸುಮಾರು ೫೮ ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬೇಸಿಗೆ ಬೆಳೆ ಬಿತ್ತನೆಯಾಗಿದೆ ಎಂದು ಕೇಂದ್ರ ಕೃಷಿ ಇಲಾಖೆ ತಿಳಿಸಿದೆ. ೩೦ ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಭತ್ತ ಹಾಗೂ ೮ ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬೇಳೆ-ಕಾಳು ಬಿತ್ತನೆಯಾಗಿದೆ ಎಂದು ಅಧಿಕೃತವಾಗಿ ತಿಳಿಸಿದೆ.

ಸಿರಿಧಾನ್ಯಗಳನ್ನು ಸುಮಾರು ೧೧ ಹೆಕ್ಟೇರ್ ಹಾಗೂ ತೈಲ ಬೀಜಗಳನ್ನು ೭ ಲಕ್ಷದ ೭೪ ಸಾವಿರ ಹೆಕ್ಟೇರ್ ಪ್ರದೇಶಗಳಲ್ಲಿ ಬಿತ್ತನೆ ಮಾಡಲಾಗಿದೆ.

***************

ದೇಶ ೨೦೨೫-೨೬ನೇ ಹಣಕಾಸು ವರ್ಷದಲ್ಲಿ ೬.೦೫ ಗಿಗಾವ್ಯಾಟ್‌ನಷ್ಟು ಹೆಚ್ಚುವರಿ ಪವನಶಕ್ತಿ ವಿದ್ಯುತ್ ಉತ್ಪಾದಿಸಿದೆ. ಇದರೊಂದಿಗೆ ಒಟ್ಟು ಸ್ಥಾಪಿತ ಪವನ ವಿದ್ಯುತ್ ಸಾಮರ್ಥ್ಯ ೫೬ ಗಿಗಾವ್ಯಾಟ್ ಪ್ರಮಾಣವನ್ನು ದಾಟಿದೆ. ನೀತಿ ಬೆಂಬಲ ಉತ್ತಮವಾದ ಯೋಜನಾ ಅನುಷ್ಠಾನಗಳಿಂದ ಈ ಸಾಧನೆ ಸಾಧ್ಯವಾಗಿದೆ ಎಂದು ಹೊಸ ಮತ್ತು ನವೀಕರಿಸಬಹುದಾದ ಇಂಧನ ಸಚಿವಾಲಯ ತಿಳಿಸಿದೆ.

೨೦೩೦ರ ವೇಳೆಗೆ ಪಳೆಯುಳಿಕೇತರ ಇಂಧನ ಸಾಮರ್ಥ್ಯವನ್ನು ೫೦೦ ಗಿಗಾವ್ಯಾಟ್‌ಗೆ ಹೆಚ್ಚಿಸಬೇಕೆನ್ನುವುದು ರಾಷ್ಟ್ರೀಯ ಗುರಿಯಾಗಿದೆ.

***************

ಅಮೆರಿಕಾ ಮತ್ತು ಇಸ್ರೇಲ್ ನಡೆಸಿದ ದಾಳಿಯಲ್ಲಿ ಇರಾನಿನ ಇಸ್ಲಾಮಿಕ್ ರೆವಲ್ಯೂಷನರಿ ಗಾರ್ಡ್ಸ್ ಕೋರ್-ಐಆರ್‌ಜಿಸಿ ಗುಪ್ತಚರ ಮುಖ್ಯಸ್ಥ ಮೇಜರ್ ಜನರಲ್ ಸೆಯಿದ್ ಮಜಿದ್ ಖಡೇಮಿ ಮೃತಪಟ್ಟಿದ್ದಾರೆ.

ಇಂದು ಬೆಳಗಿನ ಜಾವ ನಡೆದ ದಾಳಿಯಲ್ಲಿ ಈ ಸಾವು ಸಂಭವಿಸಿದೆ ಎಂದು ಐಆರ್‌ಜಿಸಿ ಅಧಿಕೃತ ಮಾಹಿತಿ ನೀಡಿದೆ. ಕಳೆದ ೫೦ ವರ್ಷಗಳಿಂದ ಸೇವೆ ಸಲ್ಲಿಸುತ್ತಿದ್ದ ಸೆಯಿದ್ ಮಜಿದ್ ಖಡೇಮಿ, ಇರಾನಿನ ಬೇಹುಗಾರಿಕೆ ಮತ್ತು ಭದ್ರತಾ ಸೇವೆಗಳಲ್ಲಿ ಪ್ರಮುಖ ಪಾತ್ರ ವಹಿಸಿದ್ದರು.

***************

ಇದೇ ೯ ರಂದು ಮತದಾನ ನಿಗದಿಯಾಗಿರುವ ಅಸ್ಸಾಂ, ಕೇರಳ, ಪುದುಚೆರಿ ಕೇಂದ್ರಾಡಳಿತ ಪ್ರದೇಶಗಳು ಹಾಗೂ ಉಪಚುನಾವಣೆ ನಡೆಯಲಿರುವ ಕ್ಷೇತ್ರಗಳಲ್ಲಿ ಬಹಿರಂಗ ಪ್ರಚಾರಕ್ಕೆ ನಾಳೆ ತೆರೆ ಬೀಳಲಿದೆ.

ಅಸ್ಸಾಂನ ೧೨೬, ಕೇರಳದ ೧೪೦, ಕೇಂದ್ರಾಡಳಿತ ಪ್ರದೇಶ- ಪುದುಚೆರಿಯ ೩೦ ವಿಧಾನಸಭಾ ಕ್ಷೇತ್ರಗಳು ಹಾಗೂ ಉಪಚುನಾವಣೆ ನಡೆಯಲಿರುವ ಕರ್ನಾಟಕದ ಬಾಗಲಕೋಟೆ ಮತ್ತು ದಾವಣಗೆರೆ ದಕ್ಷಿಣ ಕ್ಷೇತ್ರ ಸೇರಿದಂತೆ ೮ ಮತ ಕ್ಷೇತ್ರಗಳಲ್ಲಿ ಇಂದು ವಿವಿಧ ರಾಜಕೀಯ ಪಕ್ಷಗಳಿಂದ ಭರದ ಪ್ರಚಾರ ನಡೆಯಿತು.

***************

ಅಸ್ಸಾಂನ ಪ್ರತಿ ವಲಯದ ಅಭಿವೃದ್ಧಿಗಾಗಿ ಆದ್ಯತೆ ಮೇಲೆ ಕಾರ್ಯನಿರ್ವಹಿಸುವುದಾಗಿ ಹಿರಿಯ ಬಿಜೆಪಿ ಧುರೀಣ ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ.

ಅಸ್ಸಾಂನ ಹೋಜೈನಲ್ಲಿಂದು ಚುನಾವಣಾ ಪ್ರಚಾರ ನಡೆಸಿದ ಅವರು, ತಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ರಾಜ್ಯದಲ್ಲಿನ ವಿದ್ಯುತ್ ಉತ್ಪಾದನೆಗೆ ಒತ್ತು ನೀಡಿದೆ. ಮಾರಿಗಾನ್‌ನಲ್ಲಿ ತೆರೆಯಲಾಗುತ್ತಿರುವ ಸೆಮಿ ಕಂಡಕ್ಟರ್ ಸೌಲಭ್ಯ ವಿವಿಧ ಉದ್ಯಮಗಳಿಗೆ ಅವಕಾಶ ಕಲ್ಪಿಸಲಿದೆ ಎಂದು ಹೇಳಿದರು.

ಪ್ರಧಾನಿ ಅವರು ಬರ್ಪೆಟಾದಲ್ಲಿ ಚುನಾವಣಾ ರ‍್ಯಾಲಿ ಉದ್ದೇಶಿಸಿ ಮಾತನಾಡಿ, ಬಿಜೆಪಿ ಮೂರನೇ ಬಾರಿಯೂ ಅಸ್ಸಾಂನಲ್ಲಿ ಜಯ ಸಾಧಿಸಿ ಸರ್ಕಾರ ರಚಿಸಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

***************

ತಮಿಳುನಾಡಿನ ೨೩೪ ವಿಧಾನಸಭಾ ಕ್ಷೇತ್ರಗಳಲ್ಲಿ ನಾಮಪತ್ರ ಸಲ್ಲಿಸಲು ಕೊನೆಯ ದಿನವಾದ ಇಂದು ವಿವಿಧ ರಾಜಕೀಯ ಪಕ್ಷಗಳ ಹಿರಿಯ ಮುಖಂಡರು ನಾಮಪತ್ರ ಸಲ್ಲಿಸಿದರು.

ಮಾಜಿ ಮುಖ್ಯಮಂತ್ರಿ ಹಾಗೂ ವಿಪಕ್ಷ ನಾಯಕ ಪಳನಿಸಾಮಿ ಬಿಜೆಪಿ ರಾಜ್ಯ ಘಟಕದ ಮಾಜಿ ಅಧ್ಯಕ್ಷ ಹಾಗೂ ಪ್ರಸ್ತುತ ಕೇಂದ್ರ ಸಚಿವ ಡಾ.ಎಲ್.ಮುರುಗನ್, ತೆಲಂಗಾಣದ ಮಾಜಿ ರಾಜ್ಯಪಾಲರಾದ ಡಾ.ತಮಿಳಿಸೈ ಸೌಂದರರಾಜನ್, ರಾಜ್ಯ ಬಿಜೆಪಿಯ ಅಧ್ಯಕ್ಷ ನೈನಾರ್ ನಾಗೇಂದ್ರನ್ ನಾಮಪತ್ರ ಸಲ್ಲಿಸಿದರು.

***************

ದೇಶದಲ್ಲಿ ಕಳೆದ ೧೦ ವರ್ಷಗಳಲ್ಲಿ ಮೀನು ಉತ್ಪಾದನೆ ದ್ವಿಗುಣಗೊಂಡಿದೆ. ೨೦೧೩-೧೪ರಲ್ಲಿ ಸುಮಾರು ೯೫ ಲಕ್ಷ ಟನ್‌ಗಳಷ್ಟಿದ್ದ ಮೀನು ಉತ್ಪಾದನೆ ೨೦೨೪-೨೫ರಲ್ಲಿ ೧೯೭ ಲಕ್ಷ ಟನ್ ದಾಟಿದೆ.

ಮೀನುಗಾರಿಕೆಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರ ೨೦೧೪-೨೦೧೫ ರಿಂದ ಜಾರಿಗೊಳಿಸಿದ ವಿವಿಧ ಯೋಜನೆಗಳ ಪರಿಣಾಮವಾಗಿ, ನೇರ ಹಾಗೂ ಪರೋಕ್ಷವಾಗಿ ಸುಮಾರು ೭೪ ಲಕ್ಷಕ್ಕೂ ಹೆಚ್ಚು ಅಧಿಕ ಉದ್ಯೋಗಾವಕಾಶಗಳು ಸೃಷ್ಟಿಯಾಗಿರುವುದು ಎಂದು ಅಧಿಕೃತ ಅಂಕಿ-ಅಂಶಗಳಲ್ಲಿ ವ್ಯಕ್ತವಾಗಿವೆ. ಸಮುದ್ರ ಆಹಾರ ರಫ್ತು ಪ್ರಮಾಣ ಕಳೆದ ಹಣಕಾಸು ವರ್ಷದಲ್ಲಿ ಗಮನಾರ್ಹವಾಗಿ ಅಂದರೆ, ೬೨ ಸಾವಿರ ಕೋಟಿ ರೂಪಾಯಿಗಳಿಗೆ ವಿಸ್ತರಿಸಿದೆ.

***************

ರಾಷ್ಟ್ರ ರಾಜಕೀಯದಲ್ಲಿ ದೇಶ ಮೊದಲು ಎನ್ನುವ ಹೊಸ ತತ್ವವನ್ನು ಬಿಜೆಪಿ ಸ್ಥಾಪಿಸಿದೆ ಎಂದು ಪ್ರಧಾನಿ ಹಾಗೂ ಹಿರಿಯ ಬಿಜೆಪಿ ಧುರೀಣ ನರೇಂದ್ರ ಮೋದಿ ಹೇಳಿದ್ದಾರೆ.

ಪಕ್ಷ ತಮಗೆ ದೇಶ ಸೇವೆ ಸಲ್ಲಿಸಲು ಅವಕಾಶ ಕಲ್ಪಿಸಿದೆ. ಇದಕ್ಕಾಗಿ ಕೃತಜ್ಞತೆಯನ್ನು ಸಲ್ಲಿಸುವ ಸಂದರ್ಭ ಇದಾಗಿದೆ ಎಂದು ಬಿಜೆಪಿಯ ೪೭ನೇ ಸಂಸ್ಥಾಪನಾ ದಿನದ ಸಂದರ್ಭದಲ್ಲಿ ನರೇಂದ್ರ ಮೋದಿ ಸಾಮಾಜಿಕ ಮಾಧ್ಯಮದಲ್ಲಿ ತಿಳಿಸಿದ್ದಾರೆ.

ಡಾ.ಶ್ಯಾಮಾ ಪ್ರಸಾದ್ ಮುಖರ್ಜಿ, ದೀನ್ ದಯಾಳ್ ಉಪಾಧ್ಯಾಯ್, ನಾನಾಜಿ ದೇಶ್‌ಮುಖ್, ಕುಶಬಾವು ಠಾಕರೆ, ಅಟಲ್ ಬಿಹಾರಿ ವಾಜಪೇಯಿ, ಡಾ.ಲಾಲ್ ಕೃಷ್ಣ ಅಡ್ವಾಣಿ ಮತ್ತು ಮುರಳಿ ಮನೋಹರ್ ಜೋಶಿ ಅವರ ಸೇವೆಯನ್ನು ಅವರು ಸ್ಮರಿಸಿದ್ದಾರೆ.

***************

ಬಂಗೋಲಿಯಾದಲ್ಲಿ ನಡೆದಿರುವ ಏಷ್ಯನ್ ಬಾಕ್ಸಿಂಗ್ ಚಾಂಪಿಯನ್‌ಶಿಪ್‌ನಲ್ಲಿ ಪ್ರೀತಿ ಪೂಜಾ, ಪ್ಯಾರೀಸ್ ಒಲಿಂಪಿಕ್ ಕಂಚು ಪದಕ ವಿಜೇತೆ ಕೊರಿಯಾದ ಏ ಜೆ ಇಮ್ ಅವರನ್ನು ಮಣಿಸಿ ಫೈನಲ್ಸ್ ಪ್ರವೇಶಿಸಿದ್ದಾರೆ. ಇಂದು ನಡೆದ ಪಂದ್ಯದಲ್ಲಿ ಪ್ರೀತಿ, ಏ ಜೆ ಎಮ್ ವಿರುದ್ಧ ಅವರನ್ನು ಎಲ್ಲಾ ಮೂರು ಸುತ್ತುಗಳಲ್ಲಿ ಮೇಲುಗೈ ಸಾಧಿಸಿ ೫-೦ ಅಂತರದ ಜಯ ದಾಖಲಿಸಿದರು.

ಪ್ರೀತಿ ಅವರು ಚಿನ್ನದ ಪದಕಕ್ಕಾಗಿ ನಡೆಲಿರುವ ಸೆಣಸಾಟದಲ್ಲಿ ಚೀನಾ ತೈಪೈನ ಹೂವಾಂಗ್ ಸಿಯಾವೊ ವೆನ್ ಅವರನ್ನು ಎದುರಿಸಲಿದ್ದಾರೆ.

ನಿಖತ್ ಜರಿನ್ ಮತ್ತು ಲವ್‌ಲೀನಾ ಗೊರ್ಗೊ ಹೇನ್ ಚಾಂಪಿಯನ್‌ಶಿಪ್‌ನಿಂದ ಹೊರಬಿದ್ದಿದ್ದಾರೆ.

***************

ಕೊಲ್ಕತ್ತಾದ ಈಡನ್ ಗಾರ್ಡನ್ಸ್‌ನಲ್ಲಿ ಇಂದು ನಡೆಯುತ್ತಿರುವ ಐಪಿಎಲ್ ಟಿ-೨೦ ಕ್ರಿಕೆಟ್ ಪಂದ್ಯದಲ್ಲಿ ಕೊಲ್ಕತ್ತಾ ನೈಟ್ ರೈಡರ್ಸ್ ಮತ್ತು ಪಂಜಾಬ್ ಕಿಂಗ್ಸ್ ತಂಡಗಳು ಮುಖಾಮುಖಿಯಾಗಿವೆ.

ಟಾಸ್ ಗೆದ್ದ ಕೊಲ್ಕತ್ತಾ ನೈಟ್ ರೈಡರ್ಸ್ ತಂಡ ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿದೆ.

*******ಮುಕ್ತಾಯ********